3. ಎಂ.ಬಿ.ಬಿ.ಎಸ್. ವೈದ್ಯರಿಗೆ ಅರವಳಿಕೆ ಹಾಗೂ ಸಿಜೇರಿಯನ್ ಶಸ್ತ್ರಚಿಕಿತ್ಸೆಗಳಿಗೆ ತರಬೇತಿ ನೀಡಲಾಗುತ್ತಿದ್ದು, ಈ ಮೂಲಕ ಸ್ತ್ರೀರೋಗ ಹಾಗೂ ಅರವಳಿಕೆ ತಜ್ಞರ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗಿದೆ.

4. ಭಾರತ ಸಂವಿಧಾನದ ಅನುಚ್ಛೇದ 371-ಜೆ ರೀತ್ಯ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಪ್ರಾದೇಶಿಕ ಮಟ್ಟದ ಸ್ಥಳೀಯ ವೃಂದ ಕುರಿತಂತೆ ಅಧಿಸೂಚನೆ ಹೊರಡಿಸಲಾಗಿದೆ. ಈ ಹುದ್ದೆಗಳಿಗೆ ಸಂಬಂಧಪಟ್ಟ ವೈದ್ಯರು ಮತ್ತು ಸಿಬ್ಬಂದಿ ವರ್ಗದವರಿಂದ ಇಚ್ಛೆ ಪತ್ರವನ್ನು ಪಡೆದು, ತದನಂತರ ಖಾಲಿ ಹುದ್ದೆಗಳನ್ನು ಗುರುತಿಸಿ, ಅವುಗಳನ್ನು ಸ್ಥಳೀಯ ವೃಂದ ಮತ್ತು ಮೀಸಲಾತಿ ನಿಯಮಗಳನ್ವಯ ವರ್ಗೀಕರಿಸಿ, ತದನಂತರ ತಜ್ಞ ವೈದ್ಯರು ಹಾಗೂ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ದಂತ ಆರೋಗ್ಯಾಧಿಕಾರಿ ಮತ್ತು ಇತರೆ ಸಿಬ್ಬಂದಿ ವರ್ಗಗಳ ಹಲವು ವೃಂದಗಳ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ನೇಮಕಾತಿ ಮಾಡಿಕೊಳ್ಳಲು ಮತ್ತು ಕೆಲವು ಹುದ್ದೆಗಳನ್ನು ಪದೋನ್ನತಿ ಮೂಲಕ ಭರ್ತಿ ಮಾಡಲು ಉದ್ದೇಶಿಸಲಾಗಿದೆ.

ತಾಲ್ಲೂಕು ಕೆಡಿಪಿ ಅಧ್ಯಕ್ಷರು

2804 (3234), ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ)

ಅ) 2011ನೇ ಸಾಲಿನ ಜನಗಣತಿಯ ಪ್ರಕಾರ ಇರುವ ಮನೆಗಳ ಸಂಖ್ಯೆ ಎಷ್ಟು; ಕುಟುಂಬಗಳ ಸಂಖ್ಯೆ ಎಷ್ಟು; ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಜಾತಿಯವರ ಜನಸಂಖ್ಯೆ ಹಾಗೂ ಒಟ್ಟು ಜನಸಂಖ್ಯೆ (ಮಹಿಳೆ, ಪುರುಷ ಹಾಗೂ ಇತರರ ಮಾಹಿತಿ) ಎಷ್ಟು (ವಿಧಾನಸಭಾ ಮತಕ್ಷೇತ್ರದ ಪುರಸಭೆ, ನಗರಸಭೆ, ಗ್ರಾಮವಾರು ಪ್ರತ್ಯೇಕವಾಗಿ ಮಾಹಿತಿ ಒದಗಿಸುವುದು);

ಆ) ರಾಜ್ಯದಲ್ಲಿರುವ ತಾಲ್ಲೂಕುಗಳು ಎಷ್ಟು; ಯಾವ ಯಾವ ತಾಲ್ಲೂಕಿನಲ್ಲಿ ಯಾವ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು ಕೆ.ಡಿ.ಪಿ. ಅಧ್ಯಕ್ಷರಾಗಿದ್ದಾರೆ; ಅದಕ್ಕೆ ಅನುಸರಿಸುವ ಮಾನದಂಡಗಳು ಏನು;

ಇ) ರಾಜ್ಯದಲ್ಲಿ ತಾಲ್ಲೂಕುವಾರು ಕೆ.ಡಿ.ಪಿ. ಅಧ್ಯಕ್ಷತೆಯ ಅರ್ಹತೆಯನ್ನು ಹೊಂದಿರುವ ಮಾನ್ಯ ಶಾಸಕರುಗಳ ಸ್ಥಾನಗಳು ತೆರವಾಗಿವೆಯೇ; ಹಾಗಿದ್ದಲ್ಲಿ, ಯಾವ ಯಾವ ಕ್ಷೇತ್ರಗಳು ತೆರವಾಗಿವೆ; ಪ್ರಸ್ತುತ ತೆರವಾಗಿರುವ ಅಧ್ಯಕ್ಷರ ಸ್ಥಾನವು ಯಾವ ಕ್ಷೇತ್ರಕ್ಕೆ ಹೋಗುವುದು ಹಾಗೂ ಅಲ್ಲಿ ಅಧ್ಯಕ್ಷತೆಯನ್ನು ವಹಿಸುವ ಪ್ರಸ್ತುತ ಮಾನ್ಯ ಶಾಸಕರು ಯಾರು; ಅಂತಹ ತಾಲ್ಲೂಕುಗಳು ಯಾವುವು (ವಿಧಾನಸಭಾ ಮತಕ್ಷೇತ್ರವಾರು ಮಾಹಿತಿ ನೀಡುವುದು);

ಈ) ತಾಲ್ಲೂಕಿನ/ಕ್ಷೇತ್ರದ ಅಭಿವೃದ್ಧಿಯ ಹಿತದೃಷ್ಟಿಯಿಂದ ಎಷ್ಟು ದಿನಗಳಿಗೊಮ್ಮೆ ತಾಲ್ಲೂಕು ಕೆ.ಡಿ.ಪಿ. ಅಧ್ಯಕ್ಷರು ಸಭೆಯನ್ನು ಆಯೋಜಿಸಬಹುದಾಗಿದೆ;

ಉ) ಸಭೆಯನ್ನು ಯಾವ ಇಲಾಖೆಯಿಂದ ಆಯೋಜಿಸಲಾಗುವುದು; ಆಯೋಜನಾ ಅಧಿಕಾರಿ ಯಾರು; ಅವರ ಜವಾಬ್ದಾರಿಗಳು ಏನು;

ಊ) ಸಭೆಗೆ ಆಗಮಿಸದೆ ಗೈರು ಹಾಜರಾಗುವ ಅಧಿಕಾರಿಗಳ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳಾವುವು?

ಶ್ರೀ ಎಸ್.ಆರ್.ಪಾಟೀಲ್ (ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) 2011ನೇ ಸಾಲಿನ ರಾಜ್ಯದ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ, ಒಟ್ಟು ಕುಟುಂಬಗಳ ಸಂಖ್ಯೆ, ಒಟ್ಟು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಜಾತಿವಾರು ಜನಸಂಖ್ಯೆಯ (ಪುರುಷವಾರು ಮತ್ತು ಮಹಿಳೆವಾರು) ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ರಾಜ್ಯದಲ್ಲಿ ಒಟ್ಟು 176 ತಾಲ್ಲೂಕುಗಳು ಇರುತ್ತವೆ. ಸರ್ಕಾರದ ಆದೇಶ ಸಂಖ್ಯೆ: ಪಿಡಿ 309 ಪಿಟಿಪಿ 94, ದಿನಾಂಕ:07.08.1995ರ ಪ್ರಕಾರ ಒಂದಕ್ಕಿಂತ ಹೆಚ್ಚು ಶಾಸಕರನ್ನೊಳಗೊಂಡ ತಾಲ್ಲೂಕಿನಲ್ಲಿ ಅತೀ ಹೆಚ್ಚು ಕ್ಷೇತ್ರವನ್ನು ಪ್ರತಿನಿಧಿಸುವ ವಿಧಾನ ಸಭಾ ಸದಸ್ಯರು ಆಯಾ ತಾಲ್ಲೂಕಿನ ತ್ರೈಮಾಸಿಕ ಕೆ.ಡಿ.ಪಿ. ಸಭೆಯ ಅಧ್ಯಕ್ಷರಾಗಿರುತ್ತಾರೆ.

ಇ) ರಾಜ್ಯದಲ್ಲಿನ 176 ತಾಲ್ಲೂಕುಗಳ ಪೈಕಿ 3 ತಾಲ್ಲೂಕುಗಳಾದ (1) ಚಿಕ್ಕೋಡಿ–ಸದಲಗಾ (2) ಶಿಕಾರಿಪುರ ಮತ್ತು (3) ಬಳ್ಳಾರಿ ಗ್ರಾಮಾಂತರ ತಾಲ್ಲೂಕುಗಳಲ್ಲಿ ಕೆ.ಡಿ.ಪಿ. ತ್ರೈಮಾಸಿಕ ಸಭೆಯ ಅಧ್ಯಕ್ಷರ ಸ್ಥಾನವು ತೆರವಾಗಿರುತ್ತವೆ. ನಿಪ್ಪಾಣಿ ವಿಧಾನ ಸಭಾ ಕ್ಷೇತ್ರದ ಶಾಸಕರು ಚಿಕ್ಕೋಡಿ–ಸದಲಗಾ ವಿಧಾನ ಸಭಾ ಕ್ಷೇತ್ರದ ಕೆ.ಡಿ.ಪಿ. ತ್ರೈಮಾಸಿಕ ಸಮಿತಿಯ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುವರು. ಶಿಕಾರಿಪುರ ತಾಲ್ಲೂಕು ಕೆ.ಡಿ.ಪಿ. ತ್ರೈಮಾಸಿಕ ಸಭೆಯನ್ನು ತಾಲ್ಲೂಕು ಪಂಚಾಯತ್ ಅಧ್ಯಕ್ಷರು ಕರ್ತವ್ಯ ನಿರ್ವಹಿಸುವರು. ಬಳ್ಳಾರಿ ತಾಲ್ಲೂಕು ಕೆ.ಡಿ.ಪಿ. ತ್ರೈಮಾಸಿಕ ಸಭೆಯ ಅಧ್ಯಕ್ಷರ ಸ್ಥಾನವು ಖಾಲಿ ಇರುತ್ತದೆ.

ಈ) ಸರ್ಕಾರದ ಆದೇಶ ಸಂಖ್ಯೆ: ಪಿಡಿ 309 ಪಿಟಿಪಿ 94, ದಿನಾಂಕ:07.08.1995ರ ಪ್ರಕಾರ ತಾಲ್ಲೂಕು ಪಂಚಾಯತ್‌ನ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಪ್ರತೀ ತಿಂಗಳು ಹಾಗೂ ವಿಧಾನ ಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಕೆ.ಡಿ.ಪಿ. ಸಭೆಗಳನ್ನು ಆಯೋಜಿಸಲಾಗುತ್ತದೆ.

ಉ) ಸಭೆಯನ್ನು ತಾಲ್ಲೂಕು ಪಂಚಾಯತ್ ವತಿಯಿಂದ ಆಯೋಜಿಸಲಾಗುವುದು. ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯವರು ಆಯೋಜನಾ ಅಧಿಕಾರಿಯಾಗಿರುತ್ತಾರೆ. ಇವರು ಕೆ.ಡಿ.ಪಿ. ಸಮಿತಿ ಸದಸ್ಯರ ಕಾರ್ಯದರ್ಶಿ ಕೂಡ ಆಗಿದ್ದು, ತಾಲ್ಲೂಕು ಮಟ್ಟದ ಸಭೆಗಳನ್ನು ಕಾಲಕಾಲಕ್ಕೆ ನಡೆಸುತ್ತಾರೆ. ಹಾಗೂ ಸಂಬಂಧಪಟ್ಟ ತಾಲ್ಲೂಕು ಮಟ್ಟದ

ಅಧಿಕಾರಿಗಳಿಂದ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿಯ ಮಾಹಿತಿಯನ್ನು ಪಡೆದು ಪರಿಶೀಲನೆಗೆ ಮಂಡಿಸುವರು.

ಊ) ಕೆಡಿಪಿ ಸಭೆಗಳಿಗೆ ಗೈರು ಹಾಜರಾಗುವ ಅಧಿಕಾರಿಗಳ ವಿರುದ್ಧ ಸರ್ಕಾರ ಸುತ್ತೋಲೆ ಸಂಖ್ಯೆ ಪಿಡಿ 5 ಐಎಂಎಂ 2002 ದಿನಾಂಕ:15.02.2002ರಲ್ಲಿ ತಿಳಿಸಿರುವಂತೆ ಕ್ರಮ ಕೈಗೊಳ್ಳಲಾಗುವುದು.

ಅನುಬಂಧ

2011ನೇ ಸಾಲಿನ ಕರ್ನಾಟಕ ರಾಜ್ಯದ ಜನಗಣತಿಯ ವಿವರಗಳು:–

ಕ್ರ ಸಂ.	ವಿವರಗಳು	ಪುರುಷರು	ಮಹಿಳೆಯರು	ಇತರರು	ಒಟ್ಟು
1	ಜನಸಂಖ್ಯೆ	3,09,66,657	3,01,28,640	---	6,10,95,297
2	ಮನೆಗಳ ಸಂಖ್ಯೆ	---	---	---	1,79,99,066
3	ಕುಟುಂಬಗಳ ಸಂಖ್ಯೆ	---	---	---	1,31,79,911
4	ಪರಿಶಿಷ್ಟ ಜಾತಿ ಸಂಖ್ಯೆ	52,64,545	52,10,447	–	1,04,74,992
5	ಪರಿಶಿಷ್ಟ ಪಂಗಡ ಸಂಖ್ಯೆ	21,34,754	21,14,233	---	42,48,987
6	ಇತರೆ ಜಾತಿ ಸಂಖ್ಯೆ	2,35,67,358	2,28,03,960	---	4,63,71,318